ಈಗಿನ ನಮ್ಮ ಪದ್ಧತಿ ಪ್ರಕಾರ ಕನ್ನಡ ಗೊತ್ತಿರತಕ್ಕ ಉರ್ದು ಅಧ್ಯಾಪಕರನ್ನು ಹಾಕಬೇಕೆಂದು ಈಗ ಆದೇಶ ವಿದೆ. ನಾನು ಒಪ್ಪುತ್ತೇನೆ, ಏಕೆಂದರೆ ಒಂದು ಕಡೆ ಕನ್ನಡ ಕಲಿಯಬೇಕೆಂದು ಹೇಳಿ, ಕನ್ನಡ ಕಲಿಸತಕ್ಕ ಶಿಕ್ಷಕರನ್ನು ಉರ್ದು ಶಾಲೆಗಳಿಗೆ ಕೊಡದಿದ್ದರೆ ಅದು ಸರಿಯಾಗುವುದಿಲ್ಲ. ಅದನ್ನು ಮಾರ್ಪಾಟು ಮಾಡಿಕೊಂಡು ಹೆಚ್ಚುವರಿ ಅಧ್ಯಾಪಕರನ್ನು ಕೊಡದೆ ನಾವು ಅಧ್ಯಾಪಕರನ್ನು ಈ ಅನುದಾನ ಸಂಹಿತವಾದಂಥ ಶಾಲೆಗೆ ಮಂಜೂರು ಮಾಡುವಾಗ ಕನ್ನಡ ಅಧ್ಯಾಪಕರನ್ನು ಕೂಡ ನೇಮಕ ಮಾಡುವ ತಿದ್ದುಪಡಿ ಮಾಡಿ ನೇಮಕ ಮಾಡುವ ವ್ಯವಸ್ಥೆ ಮಾಡುತ್ತೇವೆ.

Sri. Quamarul Islam :– There are Government High Schools and aided High Schools In the Govt. aided High Schools, Kannada courses are there. Similarly, there are primary schools as well as aided Primary Schools. In the Govt. primary schools, there is a post of Kannada teachers whereas in the aided primary schools, there is no post of Kannada teachers. When there is no post, the question of appointmentdoes not arise. Sir, Kannada as already been made compulsory subject not from the Vth Standard but right from the Ist Standard, as per the Gokak Report, Who should teach them ? Boys are not able to learn Kannada in the beginning. Even after making Kannada as our State language, action has not been taken to teach them from the beginning. If teaching is not provided how can it be possible to develop Kannada? I wanted a specific and categorical answer from the Hon'ble Minister as to when he is giong to create these posts and fill up. As far as minority aided primary schools are concerned, the future of our boys is affected. They are not being taught Kannada in the schools. Otherwise., you don't make Kannada as a compulsory because Govt. is not in a position to provide Kannada teachers to these schools. If you don't create & fill up Kannada teachers posts, how can it be possible for the boys to learn Kannada ? When you make it compulsory, you come out openly and specifically about the action to be taken to provide Kannada teachers to these primary schools. You can say within this academic year or from the next academic year you are going to fill up all the Kannada teachers posts in the primary schools.

ಶ್ರೀ ಎ. ವೀರಪ್ಪ ಮೊಯಿಲಿ :– ಸನ್ಮಾನ್ಯ ಅಧ್ಯಕ್ಷರೆ. ನಾನು ಬಹಳ ವಾಕ್ಯಗಳನ್ನು ಜೋಡಣೆ ಮಾಡುವಾಗ ಬಹುಶಃ ನಿಮಗೆ ನಿರ್ದಿಷ್ಟವಾದಂಥ ಉತ್ತರ ಸಿಕ್ಕಲ್ಲ. ಆದರೆ ನಾನು ನಿರ್ದಿಷ್ಟವಾದ ಉತ್ತರವನ್ನೇ ಕೊಟ್ಟಿದ್ದೇನೆ. ಅದೇನೆಂದರೆ ಇದನ್ನು ತತ್ವಶಃ ನಾವು ಒಪ್ಪುತ್ತಿದ್ದೇವೆ ಮತ್ತು ವ್ಯಾವಹಾರಿಕವಾಗಿ ಕೂಡ ಕನ್ನಡ ಕಲಿಸತಕ್ಕಂಥ ಅಧ್ಯಾಪಕರನ್ನು ನೇಮಕ ಮಾಡಲೇಬೇಕು. ಅದನ್ನು ಯಾವ ಚೌಕಟ್ಟಿನಲ್ಲಿ ಮಾಡಬೇಕೋ ಅದನ್ನು ಇಷ್ಟರವರೆಗೂ ಮಾಡಿರಲಿಲ್ಲ. ಇಷ್ಟರವರೆಗೆ ಏನಿತ್ತು ಎಂದರೆ, ಕನ್ನಡ ಅನುಭವ ಇರತಕ್ಕಂಥ ಕನ್ನಡ ಭಾಷೆಯ ಜ್ಞಾನ ಇರತಕ್ಕಂಥ ಉರ್ದು ಅಧ್ಯಾಪಕರನ್ನು ಹಾಕಬೇಕು ಎಂಬ ಇಲ್ಲಿಯವರೆಗೆ ಇದ್ದದ್ದು. ಈ ನೀತಿಯನ್ನು ಪ್ರಸ್ತಾಪ ಪ್ರಸ್ತಾಪಿಸಿದ್ದೇನೆ. ಅದರ ಪ್ರಕಾರ ಕನ್ನಡ ಅಧ್ಯಾಪಕರನ್ನೇ ನೇಮಕ ಮಾಡುತ್ತೇವೆ. ನೇಮಕ ಮಾಡುವಾಗ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿ ಮಾಡಬೇಕೇ ಅಥವಾ ಇದ್ದ ಹುದ್ದೆಗಳ ಚೌಕಟ್ಟಿನಲ್ಲೇ ಒಂದು ಹುದ್ದೆಯನ್ನು ಕನ್ನಡ ಅಧ್ಯಾಪಕರ ಹುದ್ದೆಯನ್ನಾಗಿ ಪರಿವರ್ತಿಸಿ ಮಾಡಬೇಕೇ ಎಂಬುದನ್ನು ಆಡಳಿತಾತ್ಮಕವಾಗಿ ಪರಿಗಣನೆ ಮಾಡಿ ಮಾಡುತ್ತೇವೆ. ಈ ಒಂದು ನೀತಿಯಂತೂ ಸ್ಪಷ್ಟವಾಗಿದೆ. ಕನ್ನಡ ಅಧ್ಯಾಪಕರನ್ನು ಅನುದಾನ ಸಂಹಿತವಾದಂಥ ಉರ್ದು ಮಾಧ್ಯಮ ಶಾಲೆಗಳಿಗೆ ಕೂಡ ನೇಮಕ ಮಾಡುತ್ತೇವೆ.

ಅಧ್ಯಕ್ಷರು :– ಶ್ರೀ ಬಿ. ಎಸ್. ಚವಾಣ್‌ರವರೇ,ನಿಮ್ಮ ಪ್ರಶ್ನೆ : 238 (1327) ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಿಗೆ ವರ್ಗಾವಣೆ ಮಾಡಲಾಗಿದೆ. ಅವರ ಗ್ರೂಪ್ ಬಂದಾಗ ಅದು ಬರುತ್ತದೆ.

ವಿಷಯ :– ಮಂಡ್ಯ ನಗರಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡಲು ಕಾರ್ಯಗತವಾಗಿರುವ ಮೊದಲನೇ ಹಂತದ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 241 (971)

ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಮಂಡ್ಯ ನಗರಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡಲು ಕಾರ್ಯಗತವಾಗಿರುವ, ಮೊದಲನೇ ಹಂತದ ಯೋಜನೆಯು ನಗರದ ಜನತೆಗೆ ಕುಡಿಯುವ ನೀರಿನ ಅವಶ್ಯಕತೆಗನುಗುಣವಾದಂತೆ ಪೂರೈಸಲು ಸಮರ್ಥವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

2) ಹಾಗಿದ್ದಲ್ಲಿ, ಮಂಡ್ಯ ನಗರದ ಕುಡಿಯುವ ನೀರಿನ ಕೊರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

3) ಮಂಡ್ಯನಗರದಲ್ಲಿ ಒಳಚರಂಡಿ ಯೋಜನೆಯ ಕಾರ್ಯ ಯಾವಾಗ ಪ್ರಾರಂಭವಾಯಿತು, ಹಾಗೂ ಇದರ ಅಂದಾಜು ಮೊತ್ತವಷ್ಟು ಮತ್ತು ಯೋಜನೆಯ ಕಾರ್ಯ ಯಾವ ಹಂತದಲ್ಲಿದೆ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

1) ಹೌದು.

2) ರೂ. 1,360.00 ಲಕ್ಷಗಳಿಗೆ ಕುಡಿಯುವ ನೀರಿನ ಯೋಜನೆಯ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯು ಪರಿಶೀಲನೆಯಲ್ಲಿದೆ.

3) 1981 ರಲ್ಲಿ ಮಂಡ್ಯ ನಗರದ ಒಳಚರಂಡಿ ಯೋಜನೆಗೆ 132.00 ಲಕ್ಷ ರೂ.ಗಳ ಅಂದಾಜಿನಲ್ಲಿ ಜೀವವಿಮಾ ನಿಗಮದ ಆರ್ಥಿಕ ನೆರವಿನ ಮೇರೆಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ಸದರಿ ಕೆಲಸವನ್ನು 1982 ರಲ್ಲಿ ಕೈಗೊಳ್ಳಲಾಯಿತು. ಈ ಪೈಕಿ ಎರಡು ರೈಲ್ವೆ ಕ್ರಾಸಿಂಗ್‌ಗಳನ್ನು ಬಿಟ್ಟು, ಒಳಚರಂಡಿ ಕೊಳವೆ ಮಾರ್ಗ ಮತ್ತು ಔಟ್‌ಫಾಲ್ ಕೊಳವೆ ಮಾರ್ಗದ ಕಾಮಗಾರಿಗಳನ್ನು ಮುಗಿಸಲಾಗಿದೆ. ಶುದ್ಧೀಕರಣಾಗಾರವನ್ನು ನಿರ್ಮಿಸಲು ಕಂದಾಯ ಇಲಾಖೆಯವರು ಇನ್ನೂ ಜಮೀನನ್ನು ಮಂಡಳಿಗೆ ವಹಿಸಿಕೊಟ್ಟಿಲ್ಲ. ಕಾರಣ ಒಂದನೇ ಒಳಚರಂಡಿ ವಿಭಾಗವನ್ನು ನಿರ್ಮಿಸಲು ಬೇಕಾಗುವ ಜಮೀನನ್ನು ಮಂಡಳಿಗೆ ವಹಿಸಿಕೊಟ್ಟಿಲ್ಲ. ಎರಡನೇ ಒಳಚರಂಡಿ ವಿಭಾಗವನ್ನು ನಿರ್ಮಿಸಲು ಬೇಕಾಗಿರುವ ಜಮೀನಿನಲ್ಲಿ ಈಗಾಗಲೇ ವಾಸವಾಗಿರುವವರು ಮಂಡ್ಯ ಜಿಲ್ಲಾಧಿಕಾರಿಯವರ ವಿರುದ್ಧವಾಗಿ ಜಾಗವನ್ನು ಮಂಡಳಿಯು ವಶಪಡಿಸಿಕೊಂಡಿದ್ದಕ್ಕೆ ಅಪಪಾಲನ್ನು ಕೊಟ್ಟಿರುತ್ತಾರೆ.

ಶ್ರೀ ಎಂ. ಎಸ್. ಆತ್ಮಾನಂದ :– ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮಾನ್ಯ ಮಂತ್ರಿಗಳು ಸುಮಾರು 13.6 ಕೋಟಿ ರೂಪಾಯಿಗಳ ಕುಡಿಯುವ ನೀರಿನ ಯೋಜನೆಯು ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದಾರೆ. ಈಗಾಗಲೇ ಮಂಡ್ಯ ನಗರದಲ್ಲಿರತಕ್ಕಂಥ ಕುಡಿಯುವ ನೀರಿನ ಕೊರತೆ ಬಗ್ಗೆ ಮಾನ್ಯ ಮಂತ್ರಿಗಳಿಗೆ ನಿವೇದಿಸಿಕೊಳ್ಳಲಾಗಿದೆ. ಈ ಯೋಜನೆಯನ್ನು ಯಾವಾಗ ಕೈಗೊಳ್ಳುತ್ತಿರಿ ಎಂದು ಕೇಳುತ್ತೇನೆ ಮತ್ತು ಆದಷ್ಟು ಶೀಘ್ರವಾಗಿ ಇದನ್ನು ಕೈಗೆತ್ತಿಕೊಳ್ಳಬೇಕೆಂದು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಮತ್ತು, ಒಳಚರಂಡಿ ಯೋಜನೆಯ ಒಂದನೇ ಹಂತ ಮುಗಿದಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಈ ಒಂದನೇ ಹಂತದ ಯೋಜನೆಯಿಂದ ಫಲಾನುಭವಿಗಳಿಗೆ ಕನೆಕ್ಷನ್ ಕೊಡುತ್ತೀರಾ ? ಹಾಗೂ ಎರಡನೇ ಹಂತದ ಯೋಜನೆಯನ್ನು ಶೀಘ್ರವಾಗಿ ಮುಗಿಸಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ :– ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರಕ್ಕೆ ಕುಡಿಯುವ ನೀರಿನ ಎರಡನೇ ಹಂತದ ಯೋಜನೆಯನ್ನು ಮಾಡಲು ಸುಮಾರು 13 ಕೋಟಿ 60 ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಿದ್ದೇವೆ. ಬರುವ ಆರ್ಥಿಕ ವರ್ಷದಲ್ಲಿ ಸರ್ಕಾರದಿಂದ ಮಂಜೂರಾತಿ ಪಡೆದು ಆದಷ್ಟು ಬೇಗ ಕೆಲಸ ಪ್ರಾರಂಭ ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ. ಮತ್ತು ಈ ಒಳಚರಂಡಿ ಲೈನನ್ನು ಈಗಾಗಲೇ ಅಲ್ಲಿ ಹಾಕಿದ್ದೇವೆ. ಆದರೆ ಅದನ್ನು disposal ಮಾಡಬೇಕಾದರೆ ಅದನ್ನು Oxidisation plant ಮಾಡಬೇಕಾಗಿದೆ. ಆ ಜಾಗ ಡೆಪ್ಯೂಟಿ ಕಮಿಷನರ್ ಅವರಿಂದ ಬರಬೇಕಾಗಿದೆ. ಅದು ಬಂದಕೂಡಲೇ ಆದಷ್ಟು ಬೇಗ oxidisation plant ನ್ನು ಮಂಡ್ಯದಲ್ಲಿ ಪ್ರಾರಂಭ ಮಾಡುತ್ತೇವೆ.

ವಿಷಯ :– ಆಲೂರು ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 242 (905)

ಶ್ರೀ ಬಿ. ಆರ್. ಗುರುದೇವ್ (ಸಕಲೇಶಪುರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?